**ಈ ವಾರದ ಪಾಠವನ್ನು ಸಬ್ಬತ್ತಿಗಾಗಿ ಅಧ್ಯಯನ ಮಾಡಿರಿ, ಫೆಬ್ರವರಿ 10.**

**ಪಾಠ 6** **ಫೆಬ್ರವರಿ 3–9**

# ಪಾರುಪತ್ಯಗಾರನ ಲಕ್ಷಣಗಳು

ಸಬ್ಬತ್ತಿನ ಮಧ್ಯಾಹ್ನ: ಈ ವಾರದ ಪಾಠದ ಅಧ್ಯಯನಕ್ಕಾಗಿ: ಇಬ್ರಿಯರಿಗೆ 11:8–12; ರೋಮ 4:13, 18–21; ಮತ್ತಾಯ 6:24; ಇಬ್ರಿಯರಿಗೆ 9:14; 1 ಯೋಹಾನ 5:2, 3; ಲೂಕ 16:10–12

**ಸ್ಮರಣವಾಕ್ಯ: 'ಜನರು ನಮ್ಮನ್ನು ಕ್ರಿಸ್ತನ ಕೈ ಕೆಳಗಿನವರೆಂತಲೂ ದೇವರು ತಿಳಿಸಿರುವ ಸತ್ಯಾರ್ಥಗಳ ವಿಷಯದಲ್ಲಿ ಮನೆವಾರ್ತೆಯವರೆಂತಲೂ ಎಣಿಸಬೇಕು. ಹೀಗಿರಲು ಮನೆವಾರ್ತೆಯವನು ನಂಬಿಗಸ್ತನಾಗಿ ಕಂಡುಬರುವದು ಅವಶ್ಯವಲ್ಲವೇ.' (1 ಕೊರಿಂಥ 4:1,2)**

ಪಾರುಪತ್ಯಗಾರರು ಅವರ ಗುರುತುಗಳಿಂದ ಅಥವಾ ಅವರ ವಿಶೇಷವಾದ ಛಾಪಿನಿಂದ ಗುರುತಿಸಲ್ಪಡುತ್ತಾರೆ, ವ್ಯಾಪಾರಸ್ತರು ಯಾವ ರೀತಿಯಲ್ಲಿ ತಮ್ಮ ವಿಶೇಷವಾದ ಚಿನ್ಹೆ ಮತ್ತು ಛಾಪುಗಳ ಹೆಸರಿನಂದ ಗುರುತಿಸಲ್ಪಡುತ್ತಾರೆ. ಅನೇಕರು ತಮ್ಮ ವಿಶೇಷವಾದ ಛಾಪಿನಿಂದ ಬಹಳ ಪ್ರಸಿದ್ದಿಯನ್ನು ಪಡೆದಿದ್ದಾರೆ.

ಕ್ರೈಸ್ತ ಪಾರುಪತ್ಯಗಾರನ ಗುರುತು ಅವನು ಕ್ರಿಸ್ತನೊಂದಿಗೆ ಹೊಂದಿರುವ ಸಂಬಂಧದ ಆಧಾರವಾಗಿರುತ್ತದೆ. ನಾವು ಕ್ರಿಸ್ತನ ಗುಣಲಕ್ಷಣಗಳನ್ನು ಅನುಸರಿಸಿ ಜೀವಿಸಿ ಮತ್ತು ಅಭ್ಯಾಸ ಮಾಡಿದಾಗ, ನಮ್ಮ ಜೀವನಗಳು ನಮ್ಮ ಛಾಪನ್ನು ತೋರಿಸುತ್ತವೆ. ನಮ್ಮ ಗುರುತು ಆತನ ಗುರುತಾಗಿರುತ್ತದೆ; ನಮ್ಮ ವ್ಯಕ್ತಿತ್ವ ಆತನ ವ್ಯಕ್ತಿತ್ವದ ಜೊತೆಗೆ ಬೆಸೆದುಕೊಳ್ಳುತ್ತದೆ. (1 ಕೊರಿಂಥ 6:17).

ಈ ವಾರ ನಾವು ದೇವರ ಪಾರುಪತ್ಯಗಾರನ ಲಕ್ಷಣಗಳು ಹೇಗೆ ಅವನ ಗುರುತನ್ನು ತೋರಿಸುತ್ತವೆ ಎಂಬುದರ ಕುರಿತಾಗಿ ಕಲಿಯೋಣ. ಈ ಲಕ್ಷಣಗಳು ನಮ್ಮನ್ನು ಕ್ರಿಸ್ತನ ಬರೋಣಕ್ಕೆ ಸಿದ್ದಮಾಡಿ ಮತ್ತು ನಮಗೆ ವಹಿಸಲಾಗಿರುವ ಸತ್ಯವನ್ನು ಸಾರುವ ಕೆಲಸವನ್ನು ನಂಬಿಕೆಯ ಪಾರುಪತ್ಯಗಾರರಾಗಿ ಇರುವುದಕ್ಕೆ ನಮ್ಮನ್ನು ಪ್ರೇರೇಪಿಸುತ್ತವೆ. ಈ ಒಂದೊಂದು ಗುಣಗಳು ಕಳೆದುಹೋದದ್ದನ್ನು ಹುಡುಕಿ ರಕ್ಷಿಸಲು

ಬಂದಾತನ ಜೊತೆಯಲ್ಲಿ ನಮಗಿರುವ ಸಂಬಂಧವನ್ನು ತೋರಿಸುತ್ತವೆ. ಈ ಲಕ್ಷಣಗಳ ಕುರಿತಾಗಿ ನಾವು ಹೆಚ್ಚು ಅಧ್ಯಯನ ಮಾಡಿದ ಹಾಗೆ ಅವು ನಮ್ಮ ಜೀವನದಲ್ಲಿ ಆಳವಾದ ಅನುಭವವನ್ನು ನೀಡುತ್ತವೆ. ದೇವರ ಗುಣಗಳಾದ ಪ್ರೀತಿ, ಅದರ ಎಲ್ಲಾ ಕ್ರಿಯಾರೂಪದಲ್ಲಿ ನಮ್ಮ ಗುರುತಾಗಿ ನಮ್ಮ ಜೀವನದ ಪ್ರತಿಯೊಂದು ಭಾಗದಲ್ಲಿ ಬೆಸೆದುಕೊಂಡು ನಮ್ಮ ಜೀವನಗಳನ್ನು ಇಂದು ಮತ್ತು ನಿತ್ಯತ್ವಕ್ಕೆ ಸಿದ್ದಪಡಿಸುತ್ತದೆ.

**ಪಾಠ 6 ಪಾರುಪತ್ಯಗಾರನ ಲಕ್ಷಣಗಳು ಫೆಬ್ರವರಿ 3–9**

**ಭಾನುವಾರ ಫೆಬ್ರವರಿ 4**

## ನಂಬಿಕೆ

'ಹೀಗಿರಲು ಮನೆವಾರ್ತೆಯವನು ನಂಬಿಗಸ್ತನಾಗಿ ಕಂಡುಬರುವುದು ಅವಶ್ಯವಲ್ಲವೇ.? (1 ಕೊರಿಂಥ 4;2) 'ನಂಬಿಕೆಯ ಒಳ್ಳೆಯ ಹೋರಾಟವನ್ನು' (1 ತಿಮೋಥಿ 6:12) ಹೋರಾಡಲು ಮತ್ತು ಜಯಗಳಿಸಲು ನಂಬಿಗಸ್ತ ಪಾರುಪತ್ಯಗಾರನಗೆ ನಂಬಿಕೆ ಬಹಳ ಪ್ರಾಮುಖ್ಯ. ದೇವರು 'ನಂಬಿಗಸ್ತ' ನಾಗಿದ್ದಾನೆ ಮತ್ತು ಆತನು ನಮ್ಮಲ್ಲಿ ಕೆಲಸ ಮಾಡುವುದರ ಮೂಲಕ ನಮ್ಮನ್ನು ನಂಬಿಗಸ್ತರನ್ನಾಗಿ ಮಾಡುತ್ತಾನೆ. ನಮಗೆ ಯಾವುದು ಸರಿಯೆಂದು ತಿಳಿದಿದಿಯೋ ಅದರಲ್ಲೂ ವಿಶೇಷವಾಗಿ ಅಧ್ಯಾತ್ಮಿಕ ಯುದ್ದಗಳಲ್ಲಿ ಅದಕ್ಕೆ ಸತ್ಯವಾಗಿ ನಿಲ್ಲುವುದೇ ನಂಬಿಕೆಯಾಗಿದೆ.

ಆತ್ಮೀಯ ಹೋರಾಟಗಳು ಸರಿ ಮತ್ತು ತಪ್ಪು, ಒಳ್ಳೆಯದು ಮತ್ತು ಕೆಟ್ಟದರ ನಡುವೆ ಖಂಡಿತವಾಗಿ ಬರುತ್ತವೆ. ಅವು ನಂಬಿಕೆಯ ಹೋರಾಟದ ಭಾಗವಾಗಿವೆ. ಜೀವನದ ಪ್ರತಿಯೊಂದು ಸನ್ನಿವೇಶದಲ್ಲಿ ನಂಬಿಗಸ್ತನಾಗಿ ಉಳಿಯುವುದು ಒಳ್ಳೆಯ ಪಾರುಪತ್ಯಗಾರನ ಲಕ್ಷಣವಾಗಿದೆ. ಒಂದು ವೇಳೆ ನೀವು ಅಸ್ತಿಯನ್ನು ಪ್ರೀತಿಸಿದರೆ, ದೇವರು ಆಸ್ತಿಯ ವಿಚಾರವಾಗಿ ಏನು ಹೇಳುತ್ತಾನೆ ಎಂಬುದನ್ನು ಚೆನ್ನಾಗಿ ಅರ್ಥಮಾಡಿಕೊಂಡು ಅದನ್ನು ದೀನತೆಯಲ್ಲಿ ಪಾಲಿಸುವುದಾಗಿದೆ. ಒಂದು ವೇಳೆ ನೀವು ಕಾಮಾಸಕ್ತಿಯುಳ್ಳ ಆಲೋಚನೆಗಳ ಜೊತೆಯಲ್ಲಿ ಹೋರಾಟ ಮಾಡುತ್ತಿದ್ದರೆ, ಪವಿತ್ರತೆ ವಾಗ್ದಾನಗಳಿಗೆ ನಂಬಿಗಸ್ತರಾಗಿರಿ. ನಿಮಗೆ ಅಧಿಕಾರ ಬೇಕಾಗಿದ್ದರೆ, ದೇವರು



ಹೇಳುವ ರೀತಿಯಲ್ಲಿ ಎಲ್ಲರ ಸೇವಕನಾಗಿ ಇರಲು ಪ್ರಯತ್ನ ಪಡಿರಿ. ನಂಬಿಗಸ್ತ ಅಥವಾ ಅಪನಂಬಿಗಸ್ತನಾಗಿ ಉಳಿಯುವ ಆಯ್ಕೆಯು ಕೇವಲ ಒಂದು ಕ್ಷಣದಲ್ಲಿ ಮಾಡುವ ನಿರ್ಧಾರವಾಗಿರುತ್ತದೆ. ಒಂದು ವೇಳೆ ಅದರ ಫಲಿತಾಂಶವು ನಿತ್ಯವಾಗಿರುತ್ತದೆ.

ಇಬ್ರಿಯರಿಗೆ 11:8–12, 17–19 ಮತ್ತು ರೋಮ 4:13, 18–21 ನ್ನು ಓದಿರಿ. ಈ ವಚನಗಳು ನಂಬಿಗಸ್ತನಾಗಿ ಉಳಿಯುವುದರ ಕುರಿತಾಗಿ ಏನು ಹೇಳುತ್ತವೆ.

---

---

ಇಬ್ರಿಯ ಭಾಷೆಯಲ್ಲಿ 'ನಂಬಿಕೆ' ಎಂದರೆ ವಿಶ್ವಾಸವಿಡುವುದು. ಕೆಲವು ಇಬ್ರಿಯ ಪದಗಳು ಇದರ ಮೂಲ ಪದವನ್ನು 'ಅಮೆನ್' ಇದರ ಅರ್ಥವನ್ನು ನೋಡುವುದಾದರೆ 'ಗಟ್ಟಿತನ' ಎಂಬುದಾಗಿ 'ಭದ್ರ' ಅಥವಾ 'ಕದಲದ' ಅರ್ಥವನ್ನು ಕೂಡ ನೀಡುತ್ತದೆ. ನಂಬಿಗಸ್ತನಾಗಿರುವುದು ಎಂದರೆ ಪರೀಕ್ಷೆಗೆ ಒಳಪಟ್ಟು ಮತ್ತು ಶೋಧನೆಗಳನ್ನು ಜಯಿಸಿ ದೇವರ ಯೋಜನೆಗೆ ಬದ್ದತೆಯಾಗಿರುವುದು.

ಚಕ್ರವರ್ತಿಯ ಎದುರು ಮಾತನಾಡಲು ಸಿದ್ದತೆ ಮಾಡಿಕೊಳ್ಳುತ್ತಾ ಸುಧಾರಕನಾದ ಮಾರ್ಟಿನ್ ಲೂತರ್ ?ದೇವರ ವಾಕ್ಯವನ್ನು ಓದಿ ಆತನ ಬರವಣಿಗೆಗಳನ್ನು ಗಮನಿಸಿ, ಬರಲಿರುವ ಪ್ರಶ್ನೆಗಳನ್ನು ಹೇಗೆ ಉತ್ತರಿಸಬೇಕು ಎಂದು ಸಿದ್ದತೆಮಾಡಿಕೊಂಡು.... ಪವಿತ್ರ ವಾಕ್ಯಗಳ ಹತ್ತಿರಕ್ಕೆ ಬಂದನು.... ಪವಿತ್ರ ಗ್ರಂಥದ ಮೇಲೆ ತನ್ನ ಎಡಗೈನ್ನು ಇಟ್ಟು ತನ್ನ ಬಲಗೈನ್ನು ಪರಲೋಕದ ಕಡೆಗೆ ಎತ್ತಿ ಹಿಡಿದು ಸುವಾರ್ತೆಯ ವಿಷಯದಲ್ಲಿ ನಂಬಿಗಸ್ತನಾಗಿ ಇರುವೆನೆಂದು ಮತ್ತು ತನ್ನ ನಂಬಿಕೆಯನ್ನು ಮುಕ್ತವಾಗಿ ಪ್ರಕಟಿಸುವುದಾಗಿ ಕೊನೆಗೆ ತನ್ನ ಸಾಕ್ಷಿಯನ್ನು ತನ್ನ ಸ್ವಂತ ರಕ್ತದ ಮೂಲಕ ಮುದ್ರೆ ಹಾಕುವ ಸನ್ನಿವೇಶ ಬಂದರೂ ಕೂಡ ನಂಬಿಗಸ್ತನಾಗಿ ಉಳಿಯುವುದಾಗಿ ಪ್ರಮಾಣ ಮಾಡಿದನು.ಜೆ **ಹೆಚ್ ಮೆರ್ಲೆ ಡಿ ಆಬಿಜ್ಞೆ, ಹಿಸ್ಟರಿ ಆಫ್ ದಿ ರಿಫಾರ್ಮಮೆಶನ್ (ನ್ಯೂಯಾರ್ಕ್: ದಿ ಅಮೆರಿಕನ್ ಟ್ರಾಕ್ಟ ಸೊಸೈಟಿ, 1846), ಸಂಪುಟ .2, ಪುಸ್ತಕ 7, ಪುಟ 260**.

ಪ್ರಕಟಣೆ 2:10. ನ್ನು ಓದಿರಿ ನಮ್ಮ ಅನುದಿನದ ಜೀವನದಲ್ಲಿ ದೇವರೊಂದಿಗೆ 'ಮರಣದವೆರೆಗೂ ನಂಬಿಗಸ್ತನಾಗಿ' ಉಳಿಯುವುದ ಎಂಬುದರ ಅರ್ಥವೇನು.?

**ಪಾಠ 6 ಪಾರುಪತ್ಯಗಾರನ ಲಕ್ಷಣಗಳು ಫೆಬ್ರವರಿ 3–9**

**ಸೋಮವಾರ ಫೆಬ್ರವರಿ 5**

## ನಿಷ್ಠೆ

ಯಾವನೂ ಇಬ್ಬರೂ ಯಜಮಾನರಿಗೆ ಸೇವೆ ಮಾಡಲಾರನು. ಅವನು ಒಬ್ಬನನ್ನು ದ್ವೇಷಿಸಿ ಮತ್ತೊಬ್ಬನನ್ನು ಪ್ರಿತಿಸುವನು; ಇಲ್ಲವೇ ಒಬ್ಬನನ್ನು ಹೊಂದಿಕೊಂಡು ಮತ್ತೊಬ್ಬನನ್ನು ತಾತ್ಸಾರ ಮಾಡುವನು. ನೀವು ದೇವರನೂ ಧನವನ್ನೂ ಕೂಡ ಸೇವಿಸಲಾರಿರಿ. (ಮತ್ತಾಯ 6:24). ದೇವರಿಗೆ ನಿಷ್ಠೆಯಾಗಿ ಉಳಿಯುವುದು ಎಷ್ಟು ಪ್ರಾಮುಖ್ಯವಾದದ್ದು ಎಂದು ಈ ವಚನವು ಹೇಳುತ್ತದೆ.?

---

---

ದೇವರ ಹೆಸರಿಗೆ ಇನ್ನೊಂದು ಅರ್ಥ "ಸ್ವಗೌರವ" (ವಿಮೋಚನೆಕಾಂಡ 34:14) ನಾವು ನಿಷ್ಠೆಯಾಗಿರಲು ಎಚ್ಚರಿಕೆಯ ಕರೆಗಂಟೆಯನ್ನು ನೀಡಬೇಕು. ಸ್ವಗೌರವವುಳ್ಳ ದೇವರಿಗೆ ತೋರಿಸುವ ನಿಷ್ಠೆಯು ಪ್ರೀತಿಯ ನಿಷ್ಠೆಯಾಗಿದೆ. ನಂಬಿಕೆಯ ಹೋರಾಟದಲ್ಲಿ ನಮ್ಮನ್ನು ಯಾರು ಎಂದು ವಿವರಿಸುತ್ತದೆ ಮತ್ತು ಹೋರಾಟದಲ್ಲಿ ನಿಲ್ಲುವಂತೆ ಮಾಡುತ್ತದೆ.

ದೇವರಿಗೆ ನಮ್ಮ ನಿಷ್ಠೆಯು ಬಹಳ ಮುಖ್ಯವಾಗಿದೆ (1 ಅರಸುಗಳು 8:6) ಇದು ಪ್ರತಿಯೊಂದು ಆಕಸ್ಮಿಕವನ್ನು ದೂರದೃಷ್ಟಿಯಿಂದ ನೋಡುವ ಒಪ್ಪಂದವಲ್ಲ: ಅಥವಾ ಅದು ನಿಯಮಗಳ ಪಟ್ಟಿಯಲ್ಲ. ಬದಲಿಗೆ, ಅದು ನಮ್ಮ ನಂಬಿಕೆಗಳ ವಿಶ್ವಾಸ ಮತ್ತು ಬದ್ದತೆಯ ಪ್ರತ್ಯಕ್ಷ ಭಾವಪ್ರಕಟಣೆಯಾಗಿದೆ.

1 ಪೂರ್ವಕಾಲವೃತ್ತಾಂತ 28:9. ಈ ವಚನಗಳು ನಿಷ್ಠೆಯ ಪ್ರಾಮುಖ್ಯತೆಯ ಕುರಿತಾಗಿ ಏನು ಹೇಳುತ್ತವೆ?



ಎಲ್ಲಿ ನಿಷ್ಠೆ ಇರುತ್ತದೋ, ಅಲ್ಲಿ ನಂಬಿಕೆದ್ರೋಹದ ಸಾಧ್ಯತೆ ಇರುತ್ತದೆ. ನಿಷ್ಠೆಯು ಪ್ರೀತಿಯ ಹಾಗೆ ಮುಕ್ತವಾಗಿ ನೀಡಲಾಗಿದೆ, ಇಲ್ಲದೆ ಹೋದರೆ ಅದು ನಿಷ್ಠೆಯಲ್ಲ. ಯುದ್ದದಲ್ಲಿ ಕೆಲವೊಂದು ಬಾರಿ ಮುಂದಿನ ಸಾಲಿನ ಸೈನಿಕರು ಮುಂದೆ ನಿಂತು ಯುದ್ದ ಮಾಡಬೇಕಾಗುತ್ತದೆ. ಹಾಗೆ ಮಾಡದೆ ಹೋದರೆ ಅವರ ಅಧಿಕಾರಿಗಳು ಅವರನ್ನು ಗುಂಡಿಕ್ಕಿ ಕೊಲ್ಲುತ್ತಾರೆ. ಈ ಮನುಷ್ಯರು ತಮ್ಮ ಕರ್ತವ್ಯವನ್ನು ಮಾಡಬಹುದು,ಅದು ನಿಷ್ಠೆಯಿಂದ ಮಾಡುವ ಕಾರ್ಯವಲ್ಲ. ದೇವರು ನಮ್ಮಿಂದ ಇಂತಹ ನಿಷ್ಠೆಯನ್ನು ಎದುರುನೋಡುವುದಿಲ್ಲ.

ಯೋಬನುನನ್ನು ನೋಡಿರಿ. ಮುಂದೆ ಬರುವ ದುರಂತಗಳು ಅವನ ಕುಟುಂಬ, ಅಸ್ತಿ, ಮತ್ತು ಆರೋಗ್ಯವನ್ನು ಹಾಳು ಮಾಡುತ್ತವೆ ಎಂದು ಅವನು ದೂರದೃಷ್ಟಿಯಿಂದ ನೋಡಲಿಲ್ಲ. ಒಂದು ವೇಳೆ ಹಾಗೆ ನೋಡಿದ್ದರೆ ಅವನು ತನ್ನ ನಂಬಿಕೆ, ಪ್ರೀತಿ ಮತ್ತು ಬದ್ದತೆಯನ್ನು ಬಿಟ್ಟುಕೊಡುತ್ತಿದ್ದನು, ಆದರೆ ಅವನ ಆಯ್ಕೆಯು ನೈತಿಕತೆಯನ್ನು ಬಿಟ್ಟುಕೊಡದ ನಿಷ್ಠೆಯಾಗಿತ್ತು. ಪ್ರಾಮಾಣಿಕತೆ ಮತ್ತು ಬಹಿರಂಗವಾಗಿ ದೇವರನ್ನು ಸ್ತುತಿಸಲು ಹಿಂಜರಿಯದ ಧೈರ್ಯದಿಂದ ಈ ಶ್ರೇಷ್ಠವಾದ ಮಾತುಗಳನ್ನು ಹೇಳಿದನು 'ಆಹಾ, ಆತನು ನನ್ನನ್ನು ಕೊಲ್ಲುವನು, ಅದಕ್ಕಾಗಿ ಕಾದಿರುತ್ತೇನೆ.' (ಯೋಬನು 13:15). ದುರಂತದ ಮದ್ಯದಲ್ಲಿ ಅವನ ಸ್ವಾಮೀಭಕ್ತಿಯು ನಿಷ್ಠೆಯ ಮೂಲತತ್ವವಾಗಿದೆ, ಮತ್ತು ಒಬ್ಬ ಒಳ್ಳೆಯ ಪ್ರಾಮಾಣಿಕ ಪಾರುಪತ್ಯಗಾರನ ಉದಾಹರಣೆಯಾಗಿದೆ.

ನನಗಾಗಿ ಪ್ರಾಣಕೊಟ್ಟ ದೇವರಿಗೆ ನಾನು ಎಷ್ಟು ನಿಷ್ಠೆಯಾಗಿದ್ದೇನೆ?, ಎಂದು ನಿಮ್ಮನ್ನು ನೀವು ಪ್ರಶ್ನೆ ಮಾಡಿಕೊಳ್ಳಿರಿ. ನನ್ನ ನಷ್ಠೆಯನ್ನು ಇನ್ನೂ ಉತ್ತಮ ರೀತಿಯಲ್ಲಿ ನಾನು ಹೇಗೆ ಪ್ರದರ್ಶಿಸಲಿ.

**ಪಾಠ 6ಪಾರುಪತ್ಯಗಾರನ ಲಕ್ಷಣಗಳು ಫೆಬ್ರವರಿ 3–9**

**ಮಂಗಳವಾರ ಫೆಬ್ರವರಿ 6**

## ಶುದ್ದವಾದ ಮನಸಾಕ್ಷಿ

ನಾವು ಅನೇಕ ಪ್ರಶಸ್ತವಾದ ವಸ್ತುಗಳನ್ನು ನಾವು ಹೊಂದಿರುತ್ತೇವೆ. ಅರೋಗ್ಯ, ಪ್ರೀತಿ,ಸ್ನೇಹಿತರು, ಉತ್ತಮವಾದ ಕುಟುಂಬ ಇವೆಲ್ಲವೂ ಕೂಡ ಆಶೀರ್ವಾದಗಳು.

ಆದರೆ ಇವೆಲ್ಲವೂಗಳಿಗಿಂತ ಬಹಳ ಮುಖ್ಯವಾದದ್ದು ಶುದ್ದವಾದ ಮನಸಾಕ್ಷಿ.

ನಮ್ಮ ಮನಸಾಕ್ಷಿಯು ಒಳಗಿನ ಜೀವನವನ್ನು ತೋರಿಸುವ ಹೊರಗಿನ ಕನ್ನಡಿಯಾಗಿದೆ. ಮನಸಾಕ್ಷಿಯು ಯಾವಾಗಲೂ ಒಂದು ಉನ್ನತವಾದ ಮತ್ತು ಪರಿಪೂರ್ಣವಾದ ಪ್ರಮಾಣವನ್ನು ಹೊಂದಿರಬೇಕು. ಅದು ದೇವರ ವಾಕ್ಯ. ಆತನು ತನ್ನ ವಾಕ್ಯವನ್ನು ಆದಮನ ಹೃದಯದ ಮೇಲೆ ಬರೆದನು, ಆದರೆ ಪಾಪವು ಅದನ್ನು ಅಳಿಸಿಹಾಕಿತು, ಅವನಲ್ಲಿ ಮಾತ್ರವಲ್ಲ ಇಡೀ ಅವನ ಸಂತತಿಯಿಂದ ಅದನ್ನು ಅಳಿಸಿಹಾಕಿತು. ಆಜ್ಞೆಯ ಕೆಲವು ಭಾಗ ಮಾತ್ರ ಉಳಿದುಕೊಂಡಿತು. 'ಅವರು (ಅನ್ಯರು) ತಮ್ಮ ಹೃದಯದಲ್ಲಿ ಬರೆದದೆ ಎಂಬುದನ್ನು ತೋರ್ಪಡಿಸುತ್ತಾರೆ. ಇದಕ್ಕೆ ಅವರ ಮನಸ್ಸು ಸಹ ಸಾಕ್ಷಿಯನ್ನು ನುಡಿಯುತ್ತದೆ.' (ರೋಮ 2:15) ಎಲ್ಲಿ ಅದಾಮನು ಸೋತುಹೊದನೋ ಅಲ್ಲಿ ಯೇಸುವು ಗೆದ್ದನು. ಯಾಕೆಂದರೆ ಕ್ರಿಸ್ತನ 'ಹೃದಯದಲ್ಲಿ ದೇವರ ಆಜ್ಞೆಯಿತ್ತು' (ಕೀರ್ತನೆ 40:8)

ಪೌಲನು ಹೇಳುವ ಹಾಗೆ ಕೆಟ್ಟ ಮನಸಾಕ್ಷಿಯಿಂದ ನಮ್ಮನ್ನು ನಾವು ಕಾಪಾಡಿಕೊಳ್ಳಲು ಇರುವ ಒಂದೇ ಮಾರ್ಗ ಯಾವುದು? ಇಬ್ರಿಯರಿಗೆ 9:14.

'ಮನಸಾಕ್ಷಿಯ ಜೇಡರಬಲೆಯ ಒಳಗೆ ನಾವು ಪ್ರವೇಶಿಸಬೇಕು. ನೀತಿಸೂರ್ಯನ ಪ್ರಖರವಾದ ಕಿರಣಗಳು ಮುಕ್ತವಾಗಿ ಬೀಳುವ ಹಾಗೆ ಆತ್ಮದ ಕಿಟಕಿಗಳನ್ನು ಲೋಕದ ಕಡೆಗೆ ಮುಚ್ಚಿಹಾಕಿ ಪರಲೋಕದ ಕಡೆಗೆ ತೆರೆಯಬೇಕು.... ಅದು ಒಳ್ಳೆಯದು ಮತ್ತು ಕೆಟ್ಟದರ ನಡುವಿನ ವ್ಯತ್ಯಾಸವನ್ನು ತಿಳಿದುಕೊಳ್ಳಲು ಸಹಾಯವಾಗುವಂತೆ ಮನಸ್ಸನ್ನು ಶುದ್ದವಾಗಿ ಇಟ್ಟುಕೊಳ್ಳಬೇಕು. **ಎಲೆನ್ ಜಿ ವೈಟ್, ಮೈಂಡ್, ಕ್ಯಾರೆಕ್ಟರ್ ಅಂಡ್ ಪರ್ಸನಾಲಿಟಿ, ಸಂಪುಟ 1, ಪುಟ 327, 328**. ದೇವರ ಆಜ್ಞೆಗಳು ವಿಶ್ವಾಸಿಯ ಹೃದಯದ ಮೇಲೆ ಬರೆಯಲ್ಪಟ್ಟಾಗ (ಇಬ್ರಿಯರಿಗೆ 8:10), ಮತ್ತು ವಿಶ್ವಾಸಿಯು ನಂಬಿಕೆಯಿಂದ ಅವುಗಳನ್ನು ಕೈಕೊಂಡು ನಡೆಯುವಾಗ ಅದರ ನಿಜವಾದ ಪ್ರತಿಫಲ ಶುದ್ದ ಮನಸಾಕ್ಷಿಯಾಗಿರುತ್ತದೆ.

ನೀವು ಯಾವಾಗಲಾದರೂ ಪಾಪಪ್ರಜ್ಞೆಯಿಂದ ತಳಮಳಗೊಂಡಿದ್ದರೆ ಅದು ಎಷ್ಟು ಕಠಿಣ ಎಂದು ನಿಮಗೆ ಗೊತ್ತಿದೆ. ಅದು ಹೇಗೆ ನಿಮ್ಮ ಜೊತೆಯಲ್ಲಿ ಇರುತ್ತದೆ, ಅದು



ನಿಮಗೆ ವಿಶ್ರಾಂತಿಯನ್ನು ನೀಡುವುದಿಲ್ಲ. ಯೇಸುವಿನ ಮೇಲೆ ಮತ್ತು ನಿಮಗಾಗಿ ಮತ್ತು ನಿಮ್ಮ ಪಾಪಗಳಿಗಾಗಿ ಶಿಲುಬೆಯ ಮೇಲೆ ಆತನ ಮರಣದ ಮೇಲೆ ದೃಷ್ಟಿಯನ್ನು ಇಟ್ಟಾಗ ನಿಮ್ಮ ಪಾಪಪ್ರಜ್ಞೆಯಿಂದ ಅದು ಹೇಗೆ ನಿಮ್ಮನ್ನು ಕಾಪಾಡುತ್ತದೆ.

**ಪಾಠ 6ಪಾರುಪತ್ಯಗಾರನ ಲಕ್ಷಣಗಳು ಫೆಬ್ರವರಿ 3–9**

**ಬುಧವಾರ ಫೆಬ್ರವರಿ 7**

## ವಿಧೇಯತೆ

ಹೆಬೇಲನು ವಿಧೇಯತೆಯಿಂದ ಯಜ್ಞವೇದಿಯ ಮುಂದೆ ಮೊಣಕಾಲೂರಿ, ದೇವರು ಆಜ್ಞಾಪಿಸಿದ ಹಾಗೆ ಕುರಿಯನ್ನು ಹಿಡಿದುಕೊಂಡಿದ್ದನು. ಕಾಯಿನನು ಇನ್ನೊಂದು ಕಡೆ, ಅವನ ಯಜ್ಞವೇದಿಯ ಮುಂದೆ ಹಣ್ಣುಗಳನ್ನು ಹಿಡಿದು ಕೋಪದಿಂದ ನಿಂತಿದ್ದನು. ಇಬ್ಬರೂ ಕಾಣಿಕೆಯನ್ನು ತಂದಿದ್ದರು, ಆದರೂ ಕೂಡ ಒಬ್ಬ ಸಹೋದರನು ದೇವರ ಆಜ್ಞೆಗೆ ವಿಧೇಯತೆಯನ್ನು ತೋರಿಸಿದ್ದನು. ಕತ್ತರಿಸಲ್ಪಟ್ಟ ಕುರಿಮರಿಯು ಅಂಗಿಕಾರವಾಯಿತು. ಆದರೆ ನೆಲದ ಫಲವನ್ನು ತಿರಸ್ಕರಿಸಲಾಯಿತು. ಇಬ್ಬರೂ ಸಹೋದರರು ಕೂಡ ಬಲಿದಾನವನ್ನು ಹೇಗೆ ಅರ್ಪಿಸಬೇಕು ಎಂಬ ಸ್ಪಷ್ಟವಾದ ಮಾಹಿತಿಯನ್ನು ಹೊಂದಿದ್ದರು. ಆದರೆ ಒಬ್ಬನು ಮಾತ್ರ ದೇವರು ಹೇಳಿದ ಹಾಗೆ ವಿಧೇಯನಾದನು. (ಆದಿಕಾಂಡ 4:1–5)

'ಹೆಬೇಲನ ಮರಣವು ಯೇಸುಕ್ರಿಸ್ತನ ರಕ್ತದ ಮೂಲಕ ರಕ್ಷಣೆ ಹೊಂದುವ ವಿಧೇಯತೆಯ ಶಾಲೆಯಲ್ಲಿ ಕಾಯಿನನು ತೋರಿದ ಅವಿಧೆಯತೆಯು ದೇವರ ಯೋಜನೆಯನ್ನು ತಿರಸ್ಕಾರ ಮಾಡುವುದರ ಪ್ರತಿಫಲವಾಗಿತ್ತು. ಯಜ್ಞಬಲಿಯು ಬರಲಿರುವ ಕ್ರಿಸ್ತನ ಸ್ವಾರೂಪ್ಯವಾಗಿತ್ತು. ಕಾಯಿನನು ರಕ್ತ ಪ್ರೋಕ್ಷಣೆಯನ್ನು ತಿರಸ್ಕರಿಸಿದನು, ಅದು ಲೋಕಕ್ಕಾಗಿ ಯೇಸುಕ್ರಿಸ್ತನು ಸುರಿಸುವ ರಕ್ತಕ್ಕೆ ಸಂಕೇತವಾಗಿತ್ತು. **ಎಲೆನ್ ಜಿ ವೈಟ್ ಕಾಮೆಂಟ್ಸ್, ಎಸ್ ಡಿ ಎ ಬೈಬಲ್ ಕಾಮೆಂಟರಿ ಸಂಪುಟ 6, ಪುಟ 1109**.

ವಿಧೆಯತೆಯು ಮನಸ್ಸಿನಲ್ಲಿ ಪ್ರಾರಂಭವಾಗುತ್ತದೆ. ಅದು ಮೇಲಿನ ಅಧಿಕಾರವನ್ನು ಮನಸ್ಸಿನಲ್ಲಿ ಅಂಗಿಕರಿಸಿ ಅದನ್ನು ಕಾರ್ಯರೂಪಕ್ಕೆ ತರುವ ಮನಸ್ಸಿನ ಸ್ಥಿತಿಯನ್ನು ತೋರಿಸುತ್ತದೆ. ವಿಧೆಯತೆಯು ಅಧಿಕಾರದ ರೂಪದ ಜೊತೆಯಲ್ಲಿರುವ ಸಂಬಂಧವನ್ನು

ಮತ್ತು ಆ ಅಧಿಕಾರವನ್ನು ಒಪ್ಪುವ ವಿಧಾನವನ್ನು ತೋರಿಸುತ್ತದೆ. ಒಂದು ವೇಳೆ ನಮ್ಮ ವಿಧೆಯತೆಯು ದೇವರ ಜೊತೆಯಲ್ಲಿ ಇದ್ದು ಮತ್ತು ಅದು ಸ್ವಯಂ ಸೇವೆಯಾಗಿದ್ದರೆ.ಪ್ರೀತಿಯು ನಮ್ಮ ಸ್ವಭಾವವನ್ನು ನೈತಿಕ ಕರ್ತವ್ಯದ ಕಡೆಗೆ ನಡೆಸುತ್ತದೆ. ದೇವರಿಗೆ ವಿಧೇಯತೆ ತೋರಿಸುವುದು ದೇವರು ಹೇಳುವ ಹಾಗೆ ನಡೆಯುವುದಾಗಿದೆ, ಮತ್ತು ನಾವು ಯೋಚಿಸಿದ ಹಾಗೆ ಅದು ಇರಬೇಕಾಗಿಲ್ಲ. ಕಾಯಿನನ ಉದಾಹರಣೆಯಲ್ಲಿ ದೇವರು ಹೇಳಿದ್ದಕ್ಕಿಂತ ತಾನು ಮಾಡುವುದೇ ಸರಿ ಎನ್ನುವುದು ವಿಧೆಯತೆಯಲ್ಲ.

1 ಯೋಹಾನ 5:2,3 ಮತ್ತು ರೋಮ 1:5; 10:16, 17. ಆಜ್ಞೆ ಕ್ರಿಯೆಗಳ ಸಹಾಯವಿಲ್ಲದೆ ಕೇವಲ ನಂಬಿಕೆಯಿಂದಲೇ ರಕ್ಷಿಸಲ್ಪಡುವ ಕ್ರೈಸ್ತವರಿಗೆ ವಿಧೇಯತೆಯ ಕುರಿತಾಗಿ ಈ ವಚನಗಳು ಏನು ಹೇಳುತ್ತವೆ.

____________________

____________________

____________________

ನಾವು ರಕ್ಷಿಸಲ್ಪಡುವುದಕ್ಕಾಗಿ ವಿಧೇಯರಾಗುವುದಿಲ್ಲ, ಬದಲಿಗೆ ನಾವು ರಕ್ಷಿಸಲ್ಪಟ್ಟಿರುವುದರಿಂದ ವಿಧೇಯರಾಗಿರುತ್ತೇವೆ. ನೈತಿಕ ವಿಶ್ವಾಸ ಪ್ರಾಯೋಗಿಕ ವ್ಯಾಖ್ಯಾನವೇ ವಿಧೇಯತೆಯಾಗಿದೆ. ಸಮುವೇಲನು ಸೌಲನಗೆ ?ಯೆಹೋವನು ವಿಧೇಯುತ್ವಕ್ಕೆ ಮೆಚ್ಚುವಷ್ಟು ಯಜ್ಞಹೋಮಗಳಿಗೆ ಮೆಚ್ಚುತ್ತಾನೋ? ಯಜ್ಞವನ್ನರ್ಪಿಸುದಕ್ಕಿಂತ ಮಾತು ಕೇಳುವದು ಉತ್ತಮವಾಗಿದೆ; ಟಗರುಗಳ ಕೊಬ್ಬಿಗಿಂತ ವಿಧೇಯತ್ವವು ವಿಶೇಷವಾಗಿದೆ. (1 ಸಮುವೇಲನು 15:22)

'ಯಜ್ಞವನ್ನರ್ಪಿಸುದಕ್ಕಿಂತ ಮಾತು ಕೇಳುವದು ಉತ್ತಮವಾಗಿದೆ' ಎಂದು ಸಮುವೇಲನು ಹೇಳುವಾಗ ಅದರ ಅರ್ಥವೇನು? ಕೀಳು ಮಟ್ಟದ ಕೃಪೆಯ ಬಲೆಗೆ ಬೀಳದಂತೆ ಇದು ಕ್ರೈಸ್ತರಾದ ನಮ್ಮನ್ನು ಹೇಗೆ ತಡೆಯುತ್ತದೆ.



**ಪಾಠ 6ಪಾರುಪತ್ಯಗಾರನ ಲಕ್ಷಣಗಳು ಫೆಬ್ರವರಿ 3–9**

**ಗುರುವಾರ ಫೆಬ್ರವರಿ 7**

## ವಿಶ್ವಾಸಾರ್ಹತೆ

ಲೂಕ 16:10–12 ನ್ನು ಓದಿರಿ ವಿಶ್ವಾಸಾರ್ಹವಾಗಿರುವುದು ಎಂದರೆ ಏನು ಎಂದು ಇಲ್ಲಿ ಹೇಳುತ್ತದೆ. ಈ ಗುಣವು ನಂಬಿಕೆಯುಳ್ಳ ಪಾರುಪತ್ಯಗಾರನಗೆ ಎಷ್ಟು ಪ್ರಾಮುಖ್ಯವಾದದ್ದು.

____________________

____________________

ವಿಶ್ವಾಸರ್ಹತೆಯನ್ನು ಇಡೀ ಸತ್ಯವೇದದ ಎಲ್ಲಾ ಭಾಗಗಳಲ್ಲಿ ನಾವು ನೋಡುತ್ತೇವೆ. ಉದಾಹರಣೆಗೆ ನಾಲ್ಕು ಜನ ಯಾಜಕರು ಮಂಜೂಷವನ್ನು ಇಡೀ ರಾತ್ರಿ ಕಾಯಬೇಕಾಗಿತ್ತು. ಅವರು ಖಜಾನೆಯನ್ನು ಮತ್ತು ಅದರ ಸಂಪತ್ತನ್ನು ಕಾದು ಬೆಳಿಗ್ಗೆ ಅದರ ಕೀಲಿಯನ್ನು ಭದ್ರಪಡಿಸಬೇಕಾಗಿತ್ತು. (1 ಪೂರ್ವಕಾಲವೃತ್ತಾಂತ 9;26, 27) ಅವರು ವಿಶ್ವಾಸಾರ್ಹರಾದ್ದರಿಂದ ಅವರಿಗೆ ಈ ಕೆಲಸವನ್ನು ವಹಿಸಲಾಯಿತು.

ವಿಶ್ವಾಸಾರ್ಹವಾಗಿರುವುದು ಒಳ್ಳೆಯ ಪಾರುಪತ್ಯಗಾರನ ಗುಣವಾಗಿದೆ. ಇದರ ಮೂಲಕ ನಂಬಿಕೆಯುಳ್ಳ ಪಾರುಪತ್ಯಗಾರನು ತನ್ನ ಪಾತ್ರವನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳುತ್ತಾನೆ. ದೇವರು ವಿಶ್ವಾಸಾರ್ಹನಾಗಿರುವುದರಿಂದ ಆತನ ಹಾಗೆ ಅವರು ಇರವುದು ಅವರ ಗುರಿಯಾಗಿರುತ್ತದೆ. (ಧರ್ಮೋಪದೇಶಕಾಂಡ 32:4 1 ಅರಸುಗಳು 8:56).

ವಿಶ್ವಾಸಾರ್ಹತೆಯು ಸ್ವಭಾವದ ಒಂದು ಉನ್ನತ ಗುಣವಾಗಿದೆ. ನೋಡುವವರ ದೃಷ್ಟಿಯಲ್ಲಿ ಒಬ್ಬನು ಗಳಿಸುವ ಶ್ರೇಷ್ಠವಾದ ಗುಣ ಮತ್ತು ಅವಲಂಬನೆಯಾಗಿದೆ. ದೇವರ ಸ್ವಭಾವವನ್ನು ತೋರ್ಪಡಿಸುವುದು ಎಂದರೆ ಆತನು ಹೇಳಿದ ಹಾಗೆ ಮಾಡುವುದಾಗಿದೆ, ಎಂತಹ ಸನ್ನಿವೇಶಗಳು ಬಂದರು ಕೂಡ ನಮ್ಮ ವಿಶ್ವಾಸಾರ್ಹತೆ ಬದಲಾಗುವುದಿಲ್ಲ. (2 ಅರಸುಗಳು 12:15).

ದಾನಿಯೇಲನು ಪ್ರಪಂಚದ ಎರಡು ಶ್ರೇಷ್ಠ ರಾಜ್ಯಗಳ ಅರಸರುಗಳಿಂದ

ವಿಶ್ವಾಸಾರ್ಹನೆಂದು ಪರಿಗಣಿಸಲ್ಪಟ್ಟನು.ಅರಸರ ಆಸ್ಥಾನದಲ್ಲಿದ್ದ ವಿದ್ವಾಂಸರು ಮತ್ತು ಕಣಿಹೇಳುವವರ ಭೋದನೆಗೆ ವಿರುದ್ದವಾಗಿದ್ದರೂ ಕೂಡ ಅರಸರ ಎದುರಿಗೆ ನಿಂತು ಧೈರ್ಯವಾಗಿ ಸತ್ಯವನ್ನು ಹೇಳುವುದರಲ್ಲಿ ವಿಶ್ವಾಸಾರ್ಹತೆಯನು ತೋರಿಸಿದನು. ವಿಶ್ವಾಸಾರ್ಹತೆಯು ನೀತಿನಿಯಮಗಳಲ್ಲಿ ವಜ್ರದ ಹಾಗೆ ಇರುತ್ತದೆ.ಅದು ನೈತಿಕ ಗುಣಗಳನ್ನು ತನ್ನ ಪರಿಶುದ್ದತೆಯಲ್ಲಿ ಪ್ರದರ್ಶಿಸುತ್ತದೆ. ಇದು ಪಾರುಪತ್ಯಗಾರನಲ್ಲಿ ಒಂದು ರಾತ್ರಿಯಲ್ಲಿ ಬೆಳೆಯುವ ಗುಣವಲ್ಲ, ಬದಲಿಗೆ ಚಿಕ್ಕ ಚಿಕ್ಕ ವಿಷಯಗಳಲ್ಲಿ ನಂಬಿಗಸ್ತನಾಗಿರುವುದರಿಂದ ಸಮಯದ ಜೊತೆಯಲ್ಲಿ ಬೆಳೆಯುವ ಗುಣವಾಗಿದೆ.

ಬೇರೆಯವರು ನಮ್ಮ ವಿಶ್ವಾಸಾರ್ಹತೆಯನ್ನು ನೋಡುತ್ತಾರೆ. ಅವರು ನಮ್ಮ ಮೇಲೆ ಆಧಾರವಾಗಿದ್ದು ನಾವು ಸುಳ್ಳಿಗೆ ಆಮಿಷಕ್ಕೆ ಮತ್ತು ವ್ಯರ್ಥ ಮಾತುಗಳಿಗೆ ಬಿದ್ದುಹೋಗುವವರಲ್ಲ ಎಂದು ಗಮನಿಸುತ್ತಾರೆ. ವಿಶ್ವಾಸಾರ್ಹರಾಗಿರುವುದರಿಂದ ನಾವು ಈ ಲೋಕದಲ್ಲಿ ನಮ್ಮ ಜವಾಬ್ದಾರಿಯನ್ನು ಕಾಪಾಡುವುದು ಮತ್ತು ಪರಲೋಕಕ್ಕೆ ಬೇಕಾದ ಸಿದ್ದತೆಯನ್ನು ಮಾಡಿಕೊಳ್ಳುವುದಾಗಿದೆ. 'ನಾವು ನಂಬಿಗಸ್ತರಾಗಿರಬೇಕು, ಕ್ರಿಸ್ತನ ರಾಜ್ಯಕ್ಕೆ ವಿಶ್ವಾಸಾರ್ಹರಾಗಿರಬೇಕು, ಇದರಿಂದ ಪರಲೋಕ ರಾಜ್ಯದ ಪ್ರಜೆಗಳು ತೋರಿಸುವ ಒಳ್ಳೆಯತನ, ಕೃಪೆ, ಮತ್ತು ಕರುಣೆಯ ಶ್ರೀಮಂತ ಪ್ರತಿನಿಧಿಗಳಾಗಿ ನೋವು ಲೋಕದ ಮುಂದೆ ಸಾಕ್ಷಿಗಳಾಗಿ ನಿಲ್ಲಬೇಕು. **ಎಲೆನ್ ಜಿ ವೈಟ್ ಟೆಸ್ಟಿಮೊನಸ್ ಫಾರ್ ದಿ ಚರ್ಚ್, ಸಂಪುಟ 6,ಪುಟ 190**.

ನಿಮಗೆ ವ್ಯಯಕ್ತಿಕವಾಗಿ ಗೊತ್ತಿರುವ ವಿಶ್ವಾಸಾರ್ಹ ವ್ಯಕ್ತಿಯ ಕುರಿತಾಗಿ ನೀವು ಆಲೋಚಿಸಿರಿ. ಅವರನ್ನು ನೋಡಿ ನೀವು ಕೂಡ ವಿಶ್ವಾಸಾರ್ಹರಾಗಿ ಹೇಗೆ ಇರುವುದು ಎಂಬುದನ್ನು ಹೇಗೆ ಕಲಿಯಬಹುದು?

**ಪಾಠ 6ಪಾರುಪತ್ಯಗಾರನ ಲಕ್ಷಣಗಳು ಫೆಬ್ರವರಿ 3–9**

**ಶುಕ್ರವಾರ ಫೆಬ್ರವರಿ 7**

## ಹೆಚ್ಚಿನ ಚಿಂತನೆ;

ಪಾರುಪತ್ಯಗಾರನ ಮತ್ತೊಂದು ಗುಣವೆಂದರೆ ವ್ಯಯಕ್ತಿಕ ಹೊಣೆ. ಮನುಷ್ಯರನ್ನು ಯೇಸುವಿನಿಂದ ದೂರ ಮತ್ತು ಮನುಷ್ಯರ ಕಡೆಗೆ ಸೆಳೆಯುವುದು ಮತ್ತು ವ್ಯಯಕ್ತಿಕ



ಹೊಣೆಗಾರಿಕೆಯನ್ನು ಹಾಳುಮಾಡುವುದು ಸೈತಾನನ ಕುತಂತ್ರವಾಗಿದೆ. ಸೈತಾನನು ಈ ತಂತ್ರವು ದೇವಕುಮಾರನನ್ನು ಶೋಧಿಸಿದಾಗ ಅದು ವಿಫಲವಾಯಿತು. ಆದರೆ ಇದನ್ನು ಪಾಪದಲ್ಲಿ ಬಿದ್ದ ಮನುಷ್ಯನ ಮೇಲೆ ಪ್ರಯೋಗಿಸಿದಾಗ ಅವನು ಯಶಸ್ವಿಯಾದನು. ಎಲೆನ್ ಜಿ ವೈಟ್ ಅರ್ಲಿ ರೈಟಿಂಗ್, ಪುಟ 213.

ಕ್ರಿಸ್ತನು ನಮ್ಮ ಜೀವನದ ಕೇಂದ್ರ ಬಿಂದುವಾಗಿದ್ದು, ನಾವು ಆತನ ಮಾರ್ಗದರ್ಶನಕ್ಕಾಗಿ ಮುಕ್ತವಾಗಿರಬೇಕು. ಇದರ ಪ್ರತಿಫಲವಾಗಿ ನಮ್ಮ ನಂಬಿಕೆ, ನಿಷ್ಠೆ, ವಿಧೇಯತೆ, ಶುದ್ದ ಮನಸಾಕ್ಷಿ, ಮತ್ತು ವಿಶ್ವಾಸಾರ್ಹತೆಗಳು ನಮ್ಮ ಜೀವನದಲ್ಲಿ ಕಾಣುತ್ತವೆ. ಆಗ ಪಾರುಪತ್ಯಗಾರರಾಗಿ ನಾವು ದೇವರ ಹಸ್ತದಲ್ಲಿ ಪರಿಪೂರ್ಣರಾಗುತ್ತೇವೆ. (ಕೀರ್ತನೆ 139:23, 24)

ವ್ಯಯಕ್ತಿಕ ಹೊಣೆಗಾರಿಕೆ ಸತ್ಯವೇದದ ಬಹಳ ಪ್ರಾಮುಖ್ಯವಾದ ನಿಯಮ. ಈ ಲೋಕದಲ್ಲಿ ಇದ್ದಾಗ ಯೇಸುವು ತನ್ನ ಪರಲೋಕದ ತಂದೆಗೆ ವ್ಯಯಕ್ತಿಕ ಹೊಣೆಗಾರನಾಗಿದ್ದನು. (ಯೋಹಾನ 8:28). ನಾವು ಆಡುವ ಪ್ರತಿಯೊಂದು ವ್ಯರ್ಥವಾದ ಮಾತುಗಳಿಗೆ ಹೊಣೆಗಾರರಾಗಿದ್ದೇವೆ. (ಮತ್ತಾಯ 12:36). 'ಯಾವನಿಗೆ ಬಹಳವಾಗಿ ಕೊಟ್ಟದೆಯೋ ಅವನ ಕಡೆಯಿಂದ ಬಹಳವಾಗಿ ನಿರಿಕ್ಷಿಸಲ್ಪಡುವುದು.' (ಲೂಕ 12:48). ವ್ಯಯಕ್ತಿಕ ಹೊಣೆಗಾರಿಕೆಗೆ ಇರುವ ಬಹು ದೊಡ್ಡ ಅಡ್ಡಿಯೆಂದರೆ ನಮ್ಮ ಜವಾಬ್ದಾರಿಗಳನ್ನು ಇತರರ ಮೇಲೆ ಹೊರಿಸುವುದು. 'ನಮಗೆ ವಹಿಸಲಾಗಿರುವ ನಮ್ಮ ಸ್ವಂತ ಆಸ್ತಿಯು ಕೂಡ ಬಂಡವಾಳಕ್ಕಾಗಿ ಉಪಯೋಗಿಸಬಾರದು ಎಂಬುದನ್ನು ನಾವು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು.ಒಂದು ವೇಳೆ ಹಾಗೆ ಮಾಡಿದರೆ ಅದರ ನಾವು ಸಂಪೂರ್ಣವಾದ ಹಕ್ಕನ್ನು ಸಾಧಿಸುತ್ತೇವೆ. ನಮ್ಮ ಜವಾಬ್ದಾರಿಯನ್ನು ಇತರರ ಮೇಲೆ ಹಾಕಿ ಪಾರುಪತ್ಯಗಾರಿಕೆಯನ್ನು ಅವರ ಮೇಲೆ ಹೊರಿಸುತ್ತೇವೆ. ಅದರ ಇದು ಸಾಧ್ಯವಿಲ್ಲ, ದೇವರು ನಮ್ಮನ್ನು ವ್ಯಯಕ್ತಿಕವಾಗಿ ಪಾರುಪತ್ಯಗಾರರನ್ನಾಗಿ ನಿಯಮಿಸಿದ್ದಾನೆ.' ಎಲೆನ್ ಜಿ ವೈಟ್ ಟೆಸ್ಟಿಮೊನಸ್ ಫಾರ್ ದಿ ಚರ್ಚ್ ಸಂಪುಟ 7, ಪುಟ 177.

ಚರ್ಚಿಸಬೇಕಾದ ಪ್ರಶ್ನೆಗಳು

1. ಈ ವಾರ ನಾವು ಕಲಿತ ಪಾರುಪತ್ಯಗಾರನ ವಿವಿಧ ಗುಣಗಳನ್ನು ನೋಡಿರಿ: ವ್ಯಯಕ್ತಿಕ ಹೊಣೆಗಾರಿಕೆ, ವಿಶ್ವಾಸಾರ್ಹತೆ, ವಿಧೇಯತೆ, ನಿಷ್ಠೆ, ಶುದ್ದ ಮನಸಾಕ್ಷಿ, ಮತ್ತು ನಂಬಿಕೆ. ಇವು ಒಂದಕ್ಕೊಂದು ಹೇಗೆ ಸಂಬಂಧವನ್ನು ಹೊಂದಿವೆ? ಒಂದರಲ್ಲಿ ನಾವು ಎಡವಿದರೆ ಹೇಗೆ ಮತ್ತೊಂದರಲ್ಲಿ ನಾವು ಎಡವುತ್ತೇವೆ? ಅಥವಾ ಒಂದರಲ್ಲಿ ನಾವು ದೃಢವಾಗಿದ್ದರೆ ಮತ್ತೊಂದರಲ್ಲಿ ಹೇಗೆ ದೃಢವಾಗಿರುತ್ತೇವೆ?

2. ಪಾಪ ಪ್ರಜ್ಞೆಯಿಂದ ಕಾಡಲ್ಪಡುತ್ತಿರುವವರಿಗೆ ಸುವಾರ್ತೆಯು ಹೇಗೆ ಸಹಾಯ ಮಾಡುತ್ತದೆ ಎಂದು ಹೆಚ್ಚಾಗಿ ಆಲೋಚಿಸಿರಿ. ಅವರು ಯಾವ ವಾಗ್ದಾನಗಳನ್ನು ಹೊಂದಬಹುದು?

3. ನಾವು ನಿಷ್ಠೆಯನ್ನು ಒಳ್ಳೆಯದೆಂದು ಪರಿಗಣಿಸುತ್ತೇವೆ. ಆದರೆ ಅದು ಹಾಗೆ ಇದೆಯೋ ಕೆಟ್ಟ ವ್ಯಕ್ತಿ ಅಥವಾ ಕೆಟ್ಟ ಕಾರ್ಯಗಳಿಗೆ ನಿಷ್ಠೆಯಾಗಿರುವುದು ಎಷ್ಟು ಅಪಾಯಕಾರಿ? ಯಾಕೆ , ನಿಷ್ಠೆಯನ್ನು ಒಳ್ಳೆಯದಕ್ಕೆ ಮಾತ್ರ ಮತ್ತು ಒಳ್ಳೆಯತನಕ್ಕೆ ಮಾತ್ರ ಜೋಡಿಸುವುದು ಎಷ್ಟು ಪ್ರಾಮುಖ್ಯವಾದದ್ದು?